ಓ.ಎಸ್. ನಂ.119/17
ಪಿ ಡಬ್ಲ್ಯೂ -1

**ಸಾಕ್ಷಿಯನ್ನು ದಿನಾಂಕಃ 14.03.2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**
**ಪಾಟೀಸವಾಲುಃ ಶ್ರೀ ಬಿ.ಎ.ಪಿ. ವಕೀಲರಿಂದ**

**1.** ಒಟ್ಟು 7 ಸ್ವತ್ತುಗಳ ಮೇಲೆ ಈ ದಾವೆಯನ್ನು ಹೂಡಿರುತ್ತೇವೆ. ದಾವಾ ಸ್ವತ್ತುಗಳು ಮೂಲತಃ ನಮ್ಮ ತಾತ ತಿಮ್ಮಣ್ಣನವರಿಗೆ ಸೇರಿತ್ತು. ತಿಮ್ಮಣ್ಣನಿಗೆ ದಾವಾ ಸ್ವತ್ತುಗಳು ಹೇಗೆ ಬಂದಿರುತ್ತವೆ ಎಂದು ನನಗೆ ಗೊತ್ತಿಲ್ಲ. ನಮ್ಮ ತಾತ ತಿಮ್ಮಣ್ಣನವರಿಗೆ ದೊಡ್ಡರಂಗಪ್ಪ, ತಿಮ್ಮಣ್ಣ, ಚಿಕ್ಕರಂಗಪ್ಪ, ದೊಡ್ಡಯ್ಯ ಎಂಬ 4 ಜನ ಅಣ್ಣ-ತಮ್ಮಂದಿರು. ಎಲ್ಲರೂ ಒಟ್ಟಾಗಿ ಆಸ್ತಿಗಳನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನೋಡಿರುತ್ತೇನೆ. ಯಾವ ಯಾವ ಸರ್ವೆ ನಂಬರ್ನ ಆಸ್ತಿಗಳು ಯಾರ ಯಾರ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಾವೆಯಲ್ಲಿ ಎ ಮತ್ತು ಬಿ ಷೆಡ್ಯೂಲ್ ಸ್ವತ್ತುಗಳು ಯಾವುವು ಎಂದರೆ ನನಗೆ ಗೊತ್ತಿಲ್ಲ.

**2.** ನಮ್ಮ ತಾತ ತಿಮ್ಮಣ್ಣನವರ ಅಣ್ಣ-ತಮ್ಮಂದಿರು ಸುಮಾರು ವರ್ಷಗಳ ಹಿಂದೆಯೇ ಬೇರೆ-ಬೇರೆಯಾಗಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ನಮ್ಮ ತಾತ ತಿಮ್ಮಣ್ಣನವರ ಅಣ್ಣ-ತಮ್ಮಂದಿರು ಬಾಯಿ ಮಾತಿನಲ್ಲಿ ಆಸ್ತಿಯನ್ನು ವಿಭಾಗ ಮಾಡಿಕೊಂಡಿದ್ದು ಯಾವ ವರ್ಷ ಎಂದು ನನಗೆ ಗೊತ್ತಿಲ್ಲ. ಯಾವ ಯಾವ ಸರ್ವೆ ನಂಬರ್ ಆಸ್ತಿಗಳು ಖಾತೆಯಾಗಿರುತ್ತವೆ ಎಂದರೆ ಗಟ್ಲಹಳ್ಳಿ ಸರ್ವೆ ನಂಬರ್ ಖಾತೆಯಾಗಿರುತ್ತವೆ ಎಂದು ನುಡಿದಿದ್ದಾರೆ. ಬೇರೆ ಆಸ್ತಿಗಳು ಖಾತೆಯಾಗಿರುವುದಿಲ್ಲ ಎಂದು ನುಡಿದಿದ್ದಾರೆ. ಈ ವಿಚಾರವನ್ನು ನಾನು ನನ್ನ ಪ್ರಮಾಣ ಪತ್ರದಲ್ಲಿ ಬರೆಸಿರುತ್ತೇನೆ.

**3.** ನಾವು ದೊಡ್ಡರಂಗಣ್ಣನವರನ್ನು ದಾವಾ ಸ್ವತ್ತುಗಳನ್ನು ಖಾತೆ ಮಾಡಿಸಿಕೊಡಲು ಕೇಳಿದ್ದೆವು. ದಾವಾ ಸ್ವತ್ತುಗಳನ್ನು ಅಳತೆ ಮಾಡಿಸಲು ಅರ್ಜಿ ಸಲ್ಲಿಸಿರುವುದಿಲ್ಲ. ನಮ್ಮ ತಾತ ತಿಮ್ಮಣ್ಣನವರ ಅಣ್ಣ-ತಮ್ಮಂದಿರು ಬಾಯಿ ಮಾತಿನಲ್ಲಿ ಆಸ್ತಿಯನ್ನು ವಿಭಾಗ ಮಾಡಿಕೊಂಡಂತೆ ದಾವಾ ಸ್ವತ್ತುಗಳನ್ನು ಅನುಭವಿಸುತ್ತಿದ್ದು ನಾನು ಅವರಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**
**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**